

ಕಲಿಯುತ್ತಿರುವುದು ಸರಿಯಾಗಿದೆಯೇ ಎನ್ನುವುದರ ನಿಗಾ ವಹಿಸುತ್ತಾರೆ.

ಸರ್ಕಾರಿ ಶಾಲೆಗಳಲ್ಲಿ ಕಲಿಸುವುದರಿಂದ ಏನುಪಯೋಗ ಎನ್ನುವ ಪ್ರಶ್ನೆಗೆ 'ಶಿಕ್ಷಣ ಉಚಿತ' ಎನ್ನುವುದರ ಆಚೆಗೂ ಉತ್ತರಗಳು ಸಾಕಷ್ಟಿವೆ. ಅವುಗಳಲ್ಲಿ ಮುಖ್ಯವಾದುದು ಮಕ್ಕಳಲ್ಲಿ ಬೆಳೆಯುವ ಲೋಕವಿವೇಕ. ಎಲ್ಲ ವರ್ಗದ ಮಕ್ಕಳ ಒಡನಾಟದಿಂದಾಗಿ ಮಕ್ಕಳ ಮಾನಸಿಕ ಬೆಳವಣಿಗೆ ಆರೋಗ್ಯಕರವಾಗಿರುತ್ತದೆ. ವೃತ್ತಿಪರ, ಪ್ರತಿಭಾವಂತ ಶಿಕ್ಷಕರು ಸರ್ಕಾರಿ ಶಾಲೆಗಳಲ್ಲಿ ಇರುವುದರಿಂದ ಕಲಿಕೆಯ ಮಟ್ಟವೂ ಚೆನ್ನಾಗಿರುತ್ತದೆ. ಮಾತೃಭಾಷೆಯಲ್ಲಿ ಕಲಿಯುವ ಅವಕಾಶ ಇರುವುದರಿಂದ ಮಕ್ಕಳ ಗ್ರಹಿಕೆ ಪರಿಣಾಮಕಾರಿಯಾಗಿರುತ್ತದೆ. ಇವೆಲ್ಲಕ್ಕಿಂತಲೂ ಮುಖ್ಯವಾದುದು, ಖಾಸಗಿ ಶಾಲೆಗಳಲ್ಲಿ ಸರಕಿನ ರೂಪದಲ್ಲಿ ಭಾವಿಸಲಾಗುವ ಶಿಕ್ಷಣ, ಸರ್ಕಾರಿ ಶಾಲೆಗಳಲ್ಲಿ ಮಾನವೀಯ ಸ್ವರೂಪವನ್ನು ಹೊಂದಿರುತ್ತದೆ.

ಹಾಸನದಲ್ಲಿ ನೆಲೆಸಿರುವ ಉಪನ್ಯಾಸಕಿ ಹಾಗೂ ಕವಯಿತ್ರಿ ಪಿ. ಭಾರತೀದೇವಿ ತಮ್ಮ ಮಗನಿಗಾಗಿ ಸರ್ಕಾರಿ ಶಾಲೆಯನ್ನು ಆಯ್ದುಕೊಂಡಿದ್ದಾರೆ. 'ಮಗನಿಗೆ ಕನ್ನಡ ಮಾಧ್ಯಮದಲ್ಲಿ ಶಿಕ್ಷಣ ಕೊಡಿಸುವ ತಮ್ಮ ನಿರ್ಧಾರ ಅತ್ಯುತ್ತಮ ಎಂಬ ಮೇಲರಿಮೆಯ ನಿಲುವೇನೂ ನನ್ನಲ್ಲಿಲ್ಲ' ಎನ್ನುವ ಅವರು, ಮಗನ ಶಿಕ್ಷಣದ ಕುರಿತು ಮಾತನಾಡುತ್ತಲೇ ಪ್ರಸ್ತುತ ಶೈಕ್ಷಣಿಕ ಕ್ಷೇತ್ರದತ್ತ ಬೆಳಕು ಚೆಲ್ಲುತ್ತಾರೆ.

'ಶಿಕ್ಷಣವೆಂದರೆ ಒಂದಷ್ಟು ವಿಷಯಗಳನ್ನು ಓದಿ, ಪರೀಕ್ಷೆ ಬರೆದು ಅಂಕ ಪಡೆಯುವುದಷ್ಟೇ ಅಲ್ಲ. ಶಿಕ್ಷಕರು ಮಕ್ಕಳೊಂದಿಗೆ ಹೇಗೆ ವ್ಯವಹರಿಸುತ್ತಾರೆ, ಮಕ್ಕಳ ಮನಸ್ಸು ವಿಕಾಸ ಹೊಂದುವ ಪ್ರಕ್ರಿಯೆಯನ್ನು ಶಿಕ್ಷಕರು ಗ್ರಹಿಸಿ ಅವರಿಗೆ ಹೇಗೆ ಪಾಠ ಪ್ರವಚನಗಳನ್ನು ಮಾಡುತ್ತಾರೆ ಎಂಬುದೆಲ್ಲ ಬಹುಮುಖ್ಯ. ಈ ಹಿನ್ನೆಲೆಯಲ್ಲಿ ಯೋಚಿಸಿದರೆ ಖಾಸಗಿ ಶಾಲೆಯ ಶಿಕ್ಷಕರಿಗೆ ಹೆಚ್ಚಿನ ತರಬೇತಿ ಇರುವುದಿಲ್ಲ. ಆದರೆ



